# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
## ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)
## ವಾರ್ಡ್‌ಸಮಿತಿ ಸಭೆ, ವಿಪತ್ತು ನಿರ್ವಹಣಾ ಕೋಶದ ಸಭೆ
## ದಿನಾಂಕ: 15-05-2020ರ ಸಭಾ ನಡುವಳಿ

ದಿನಾಂಕ: 15-05-2020ರಂದು ಬೆಳಿಗ್ಗೆ 11.00 ಗಂಟೆಗೆ ವಾರ್ಡ್ ನಂ.06 ಥಣಿಸಂದ್ರ ವಾರ್ಡ್ ಸಮಿತಿಯ ಮಾನ್ಯ ಅಧ್ಯಕ್ಷರು ಹಾಗೂ ಪಾಲಿಕೆ ಸದಸ್ಯರು ರವರ ಅಧ್ಯಕ್ಷತೆಯಲ್ಲಿ ಹೆಗಡೆನಗರ 2ನೇ ಮುಖ್ಯ ರಸ್ತೆ, ವಾರ್ಡ್ ಕಛೇರಿಯಲ್ಲಿ ನೆಡೆದ ವಾರ್ಡ್ ಸಮಿತಿಯ ಹಾಗೂ ವಿಪತ್ತು ನಿರ್ವಹಣಾ ಕೋಶದ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವ ವಾರ್ಡ್‌ಸಮಿತಿಅಧ್ಯಕ್ಷರು ಹಾಗೂ ಸದಸ್ಯರು | ಸಭೆಗೆ ಹಾಜರಾಗಿರುವ ಅಧಿಕಾರಿಗಳು |
|---|---|---|
| 1 | ಶ್ರೀ ಮತಿ ಕೆ.ಎಂ ಮಮಿತ, ಅಧ್ಯಕ್ಷರು | ಶ್ರೀ ಕಿರಣ್ ಬಿ, ಸ.ಕಾ.ಅ<br>ಯೋಜನಾ ವಿಭಾಗ, ಯಲಹಂಕ ವಲಯ |
| 2 | ಶ್ರೀ ಮುನಿರಾಜು ಡಿ.ಸಿ ಸದಸ್ಯರು | ಶ್ರೀ ಕೆ.ಆರ್. ಗಂಗಾಧರಯ್ಯ, ಸ.ಅ ಬೇಸ್ಕಾಂ |
| 3 | ಶ್ರಿ ಮುನಿಸ್ವಾಮಿ ಡಿ.ಸಿ ಸದಸ್ಯರು | ಶ್ರೀ ಉಮೇಶ ಜೆ.ವಿ<br>ಪೋಲೀಸ್ ಸಬ್‌ಇನ್ಸ್‌ಪೆಕ್ಟರ್,ಕೋತನೂರ ಪೋಲೀಸ್‌ಠಾಣೆ |
| 4 | ಶ್ರೀಮತಿ ಪುಟ್ಟನರಸಮ್ಮ, ಸದಸ್ಯರು | ಶ್ರೀ ರಘು ಲೈಸನಿಂಗ್‌ಅಧಿಕಾರಿ,<br>ವಿಪತ್ತು ನಿರ್ವಹಣಾ ಕೋಶ |
| 5 | ಶ್ರೀಮತಿ ಲಕ್ಷ್ಮೀ ನರಸಮ್ಮ, ಸದಸ್ಯರು | ಪ್ರೇಮಾನಂದ ಸ.ಅ<br>ಬಿ.ಡಬ್ಲೂ.ಎಸ್.ಎಸ್.ಬಿ |
| 6 | ಶ್ರೀ. ಮೋಹನ್‌ರಾಜ್. ಸದಸ್ಯರು | ಪ್ರೇಮಕುಮಾರ್<br>ಹಿರಿಯಆರೋಗ್ಯ ಪರಿವೀಕ್ಷಕರು<br>ವಾರ್ಡ್ ನಂ. 06 (ಥಣಿಸಂದ್ರ) |
| 7 | ಶ್ರೀಮತಿ. ಮಲ್ಲಿಗಮ್ಮ, ಸದಸ್ಯರು | ಬಿ. ಚಂದ್ರಪ್ಪ<br>ಕಿರಿಯಆರೋಗ್ಯ ಪರಿವೀಕ್ಷಕರು<br>ವಾರ್ಡ್ ನಂ. 06 (ಥಣಿಸಂದ್ರ) |

**ಶ್ರೀಮತಿ ಮಮತ ಕೆ.ಎಂ ಅಧ್ಯಕ್ಷರು** : ಸಭೆಗೆ ಹಾಜರಾಗಿದ್ದ ಸದಸ್ಯರು, ಅಧಿಕಾರಿಗಳು, ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ, ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ: No.COM/PSR/68/2020-21 Date: 29.04.2020 ರಂತೆ ವಾರ್ಡ್ ಮಟ್ಟದಲ್ಲಿ ವಿಪತ್ತು ನಿರ್ವಹಣಾ ಕೋಶವನ್ನು ರಚಿಸಿಕೊಂಡು ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ರೋಗ ಹರಡುತ್ತಿರುವ ಹಿನ್ನಲೆಯಲ್ಲಿ ಲಾಕ್‌ಡೌನ್ ಸಮಯದಲ್ಲಿ ವಲಸೆ ಕಾರ್ಮಿಕರು / ನಿರಾಶ್ರಿತರನ್ನು ಗುರುತಿಸಿ ಹಾಲು /ಊಟ/ ವಸತಿ/ವೈದ್ಯಕೀಯ ಸೌಲಭ್ಯಗಳನ್ನು ತಲುಪಿಸುವ ಬಗ್ಗೆ ವಿಪತ್ತು ನಿರ್ವಹಣಾಕೋಶದ ಸಭೆಯನ್ನು ನಡೆಸಲು ಸೂಚಿಸಿದ್ದು, ಅದರಂತೆ ವಿಪತ್ತು ನಿರ್ವಹಣಾ ಕೋಶದ ಸಭೆಯನ್ನು ಕರೆಯಲಾಗಿದೆಎಂದು ಸಭೆಗೆ ತಿಳಿಸಿದರು.



Scanned by CamScanner

ಈ ಸಭೆಗೆ ಬಿ.ಬಿ.ಎಂ.ಪಿ.ಯ. ಕೇಂದ್ರ ಕಛೇರಿ ವತಿಯಿಂದ ಶ್ರೀ ರಘು ಲೈಸನಿಂಗ್ ಅಧಿಕಾರಿಯವರು ಹಾಜರಾಗಿದ್ದು, ಸದರಿಯವರು ವಿಪತ್ತು ನಿರ್ವಹಣಾ ಕೋಶದ ಜವಾಬ್ದಾರಿಗಳು ಹಾಗೂ ನಿರ್ವಹಣೆಯ ಬಗ್ಗೆ ವಿವರಿಸಿದರು.

1) ಕೋಶದಲ್ಲಿರುವ ಇತರೆ ಇಲಾಖೆಯ ಅಧಿಕಾರಿಗಳು ಪಾಲಿಕೆಯೊಂದಿಗೆ ಕೆಲಸ ನಿರ್ವಹಿಸುವಂತೆ ಕ್ರಮವಹಿಸುವುದು.

2) ಮುಂದಿನ ಸಭೆಯೊಳಗಾಗಿ ವಾರ್ಡ್ ಸಮಿತಿಯ ಅಧ್ಯಕ್ಷರು ನೇತೃತ್ವದಲ್ಲಿ ಪ್ರತಿ ಸರ್ಕಾರಿ ಇಲಾಖೆಗಳು / ಅರೆ ಸರ್ಕಾರಿ/ NGO/ RWA ಅಧಿಕಾರಿಗಳ ದೂರವಾಣಿ ಸಂಖ್ಯೆಗಳೊಂದಿಗೆ ಪಟ್ಟಿ ಮಾಡಿ ವಿಪತ್ತು ಸಮಯದಲ್ಲಿ ಸಾರ್ವಜನಿಕರ ಕುಂದು ಕೊರತೆಗಳಿಗೆ ಅತಿತುರ್ತಾಗಿ ಸ್ಪಂದಿಸಲು ಕ್ರಮವಹಿಸಲು ತಿಳಿಸದರು.

3)ಇದಕ್ಕೆ ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು, ಆಶಾ ಕಾರ್ಯಕರ್ತರು, ಹೆಗಡೆನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ವೈಧ್ಯಾಧಿಕಾರಿರವರು ಮತ್ತು ವೈದ್ಯಕೀಯ ಸಿಬ್ಬಂದಿ ಹಾಗೂ ಎಲ್ಲಾ ಪಾಲಿಕೆಯ ಇತರೆ ಇಲಾಖೆಯ ಅಧಿಕಾರಿಗಳು ಒಮ್ಮತವಾಗಿ ಒಪ್ಪಿಗೆ ಸೂಚಿಸುತ್ತಾ ಪೂರ್ಣ ಪ್ರಮಾಣದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕೆಲಸ ನಿರ್ವಹಿಸುವುದಾಗಿ ತಿಳಿಸಿದರು.

<u>ಕಾಮಗಾರಿ ವಿಭಾಗ</u>ದ ಬಗ್ಗೆ : 1) ಕೋವಿಡ್–19 ಸಾಂಕ್ರಾಮಿಕರೋಗ ಹರಡುತ್ತಿರುವ ಹಿನ್ನಲೆಯಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಾ ಕಾಮಗಾರಿಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಎಲ್ಲಾ ಮುನ್ನೇಚ್ಚರಿಕೆ ಕ್ರಮಗಳನ್ನು ಕೈಗೊಂಡು ಕಾಮಗಾರಿಗಳನ್ನು ಪ್ರಾರಂಭಿಸುವುದಾಗಿ ವಾರ್ಡ್ ಸಮಿತಿ ಅಧ್ಯಕ್ಷರು ತಿಳಿಸಿದರು. 2) ವಾರ್ಡ್‌ನಲ್ಲಿರುವ ಸ್ಲಮ್ ಪ್ರದೇಶಗಳು ಹಾಗೂ ಎಲ್ಲಾ ಬಡಾವಣೆಗಳಿಗೆ ಕೋವಿಡ್–19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ಹಿನ್ನಲೆಯಲ್ಲಿ ಸೋಂಕು ನಿವಾರಕ ಔಷದಿಯನ್ನು ಸಿಂಪಡಿಸಲಾಗುತ್ತಿದೆ ಎಂದು ಎಲ್ಲರ ಗಮನಕ್ಕೆ ತರಲಾಗಿರುತ್ತದೆ.

<u>ಘನತ್ಯಾಜ್ಯ ನಿರ್ವಹಣೆ</u> ಬಗ್ಗೆ : ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಆದೇಶದಂತೆ, ಘನತ್ಯಾಜ್ಯಾ ನಿರ್ವಹಣೆ ಕೆಲಸಗಳನ್ನು ಬೆಳಿಗ್ಗೆ 7.00 ರಿಂದ 10.30 ರವರೆಗೆ ಮಾತ್ರ ನಿರ್ವಹಿಸಲಾಗುತ್ತಿದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ನಿ.) ರವರು ತಿಳಿಸಿರುತ್ತಾರೆ. ಪ್ರತಿ ನಿತ್ಯ ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಕಸವನ್ನು ತೆರವು ಮಾಡಲಾಗುತ್ತಿದ್ದು, ಪೌರಕಾರ್ಮಿಕರ ಸುರಕ್ಷತೆಯನ್ನು ಕಾಪಾಡಲಾಗುತ್ತಿದೆ ಎಂದು ತಿಳಿಸಿರುತ್ತಾರೆ. ಕೋವಿಡ್–19 ಸಾಂಕ್ರಾಮಿಕರೋಗ ಹರಡುತ್ತಿರುವ ಹಿನ್ನಲೆಯಲ್ಲಿ ಸ್ವಚ್ಚತೆಯನ್ನು ಕಾಪಾಡಲು ಘನತ್ಯಾಜ್ಯಾ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಸಲು ಮಾನ್ಯ ಅಧ್ಯಕ್ಷರು ಹಾಗೂ ಸಮಿತಿಯ ಸದಸ್ಯರುಗಳು ತಿಳಿಸಿದರು.

ಪ್ರಸ್ತುತ ಕೋವಿಡ್–19 ಸಾಂಕ್ರಾಮಿಕ ರೋಗ ಹರಡುತ್ತಿರುವ ಹಿನ್ನಲೆಯಲ್ಲಿ ಹಾಗೂ ಇದನ್ನು ತಡೆಗಟ್ಟುವ ಸಲುವಾಗಿ ಶ್ರಮಿಸಿರುವ ಎಲ್ಲಾ ಅಧಿಕಾರಿ/ನೌಕರರು ಮತ್ತು NGO/RWA ಮತ್ತು



Scanned by CamScanner

ವಾರ್ಡ್ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಧನ್ಯವಾದಗಳನ್ನು ತಿಳಿಸಿಸುತ್ತಾ ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಾಗಿ ಕಾರ್ಯನಿರ್ವಹಿಸಬೇಕೆಂದು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

15-05-2020

ಕಾರ್ಯದರ್ಶಿ
ಹಾಗೂ ಸಹಾಯಕಅಭಿಯಂತರರು
ವಾರ್ಡ್‌ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)

Mallatha K.H
ಅಧ್ಯಕ್ಷರು
ವಾರ್ಡ್ ಸಮಿತಿ ಹಾಗೂ ಪಾಲಿಕೆ ಸದಸ್ಯರು
ವಾರ್ಡ್ ನಂ. 06, (ಥಣಿಸಂದ್ರ)

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.



Scanned by CamScanner